# ಖರ್ಚು ಮಾಡಿದರಷ್ಟೇ ಸಾಲದು; ಲೆಕ್ಕವೂ ಬೇಕು



**‘ಕೆಜಿಎಫ್’ ನಿರ್ಮಾಪಕ ವಿಜಯ ಕಿರಗಂದೂರು ಸಂದರ್ಶನ**

**◆ ‘ಕೆಜಿಎಫ್’ ಗೆಲುವಿಗೆ ಕಾರಣವಾದ ಅಂಶಗಳು ಯಾವುವು?**

ಮೊದಲನೆಯದಾಗಿ ಮತ್ತು ಅತಿಮುಖ್ಯವಾಗಿ ನಿರ್ದೇಶಕರ ವಿಷನ್. ಅವರ ಪ್ರತಿಭೆಯ ಫಲ ಇದು. ಹಾಗೆಯೇ ಈ ಚಿತ್ರದ ನಟರು ಮತ್ತು ಅವರ ವಿಭಿನ್ನ ಗೆಟಪ್‌ಗಳೂ ಚಿತ್ರ ಗೆಲ್ಲಲು ಮುಖ್ಯ ಕಾರಣ. ಅಧೀರ, ಗರುಡ, ಆ್ಯಂಡ್ರೂ ಹೀಗೆ ಪಾತ್ರಗಳ ಹೆಸರುಗಳೂ ಹೊಸತಾಗಿದ್ದವು.

ಮತ್ತೊಂದು ಮುಖ್ಯ ಸಂಗತಿ ಛಾಯಾಗ್ರಹಣ ಮತ್ತು ಸಂಗೀತ. ಅಪರೂಪದ ಸೆಟ್‌ಗಳನ್ನು ನಿರ್ಮಿಸಿದ ಕಲಾನಿರ್ದೇಶಕರ ಕೊಡುಗೆಯೂ ಸಾಕಷ್ಟಿದೆ. ಮಾಧ್ಯಮಗಳಲ್ಲಿ, ಸೋಷಿಯಲ್ ಮೀಡಿಯಾಗಳಲ್ಲಿ ವ್ಯಕ್ತವಾದ ಬೆಂಬಲವೂ ಚಿತ್ರದ ಗೆಲುವಿಗೆ ಬಹುಮುಖ್ಯ ಕಾರಣ. ಎಲ್ಲರೂ ‘ಕೆಜಿಎಫ್’ ಅನ್ನು ನಮ್ಮ ಸಿನಿಮಾ ಎಂಬಂತೆ ಸ್ವಾಗತಿಸಿದರು.

**◆ ಮಾರುಕಟ್ಟೆ ಪ್ರಚಾರತಂತ್ರವೂ ಮುಖ್ಯ ಪಾತ್ರ ವಹಿಸಿದೆಯಲ್ಲವೇ?**

ಮೊದಲು ‘ಕೆಜಿಎಫ್’ ಅನ್ನು ಮೂರು ಭಾಷೆಯಲ್ಲಿ ಮಾಡಬೇಕು ಎಂದುಕೊಂಡಿದ್ದೆವು. ಆದರೆ ಚಿತ್ರದ ಪ್ರಥಮಪ್ರತಿ ಬರುವವರೆಗೂ ಯಾವ ನಿರ್ಧಾರವನ್ನೂ ತೆಗೆದುಕೊಂಡಿರಲಿಲ್ಲ. ಸಿನಿಮಾ ಮುಗಿದ ಮೇಲೆ ಮೊದಲ ಪ್ರತಿ ನೋಡಿದ ಮೇಲೆ ನನಗೆ ಈ ಸಿನಿಮಾವನ್ನು ಎಲ್ಲಿಗೆ ಬೇಕಾದರೂ ತಲುಪಿಸಬಹುದು ಎನ್ನುವ ವಿಶ್ವಾಸ ಬಂತು. ಆಮೇಲೆಯೇ ನಾನು ಮಾರ್ಕೆಟಿಂಗ್ ಬಗ್ಗೆ ಯೋಚಿಸಲು ಶುರು ಮಾಡಿದ್ದು.

ನಮ್ಮ ‘ರಾಜಕುಮಾರ’ ಸಿನಿಮಾಗೆ ಸೈಮಾ ಅವಾರ್ಡ್ ಸಿಕ್ಕಿತ್ತು. ಆ ಸಂದರ್ಭದಲ್ಲಿ ನನಗೆ ‘ಎಲ್ಲ ಭಾಷೆಯ ಪತ್ರಕರ್ತರನ್ನೂ ಒಂದೇ ಸೂರಿನಡಿಗೆ ಸೇರಿಸಿ ಪತ್ರಿಕಾಗೋಷ್ಠಿ ಮಾಡುವುದರ ಮೂಲಕ ಕೆಜಿಎಫ್ ಸಿನಿಮಾ ಪ್ರಚಾರ ಯಾಕೆ ಶುರುಮಾಡಬಾರದು’ ಎನಿಸಿತು. ಒರಾಯನ್ ಮಾಲ್‌ನಲ್ಲಿ ನಡೆದ ಆ ಪತ್ರಿಕಾಗೋಷ್ಠಿಯಲ್ಲಿ ಮುಂಬೈ, ದೆಹಲಿ, ಚೆನ್ನೈ, ಕೊಚ್ಚಿ, ಹೈದರಾಬಾದ್‌ಗಳಿಂದಲೇ 230 ಪತ್ರಕರ್ತರು ಬಂದಿದ್ದರು. ಅದು ನಮಗೆ ಸಾಕಷ್ಟು ಪ್ರಚಾರ ನೀಡಿತು. ನಂತರ ತೆಲುಗಿನ ರಾಜಮೌಳಿ ಅವರ ಸಂಪರ್ಕ ಸಿಕ್ಕಿತು. ಅವರು ಹೈದರಾಬಾದ್‌ನಲ್ಲಿ ಬೆಂಬಲ ಕೊಟ್ಟರು. ತಮಿಳಿನಲ್ಲಿ ವಿಶಾಲ್ ಬಂದರು. ಹಿಂದಿಯಲ್ಲಿ ಫರ್ಹಾನ್ ಅಖ್ತರ್, ತಡಾನಿ ಸಿಕ್ಕರು.

ಮಾರ್ಕೆಟಿಂಗ್‌ಗಾಗಿಯೇ ನಾನು 18–20 ಕೋಟಿ ರೂಪಾಯಿ ವ್ಯಯಿಸಿದ್ದೇನೆ. ನಮ್ಮ ನಿರ್ಮಾಣ ಸಂಸ್ಥೆ ನಡೆಸಿದ ವ್ಯವಸ್ಥಿತ ಯೋಜನೆಯನ್ನೂ ಇಲ್ಲಿ ನೆನಪಿಸಿಕೊಳ್ಳಲೇಬೇಕು.

**◆ ಪ್ರಚಾರಕ್ಕಾಗಿ ಹಣ ಖರ್ಚು ಮಾಡಿದ ಮಾತ್ರಕ್ಕೆ ಎಲ್ಲ ಸಿನಿಮಾವೂ ಹಿಟ್ ಆಗುವುದಿಲ್ಲ ಅಲ್ಲವೇ?**

ಎಲ್ಲ ಸಿನಿಮಾಗಳನ್ನೂ ಹೀಗೆ ಮಾಡುವುದಕ್ಕಾಗುವುದಿಲ್ಲ. ಆದರೆ ಈ ಸಿನಿಮಾ ಕಂಟೆಂಟ್ ಮೇಲೆ ನಂಬಿಕೆ ಇತ್ತು. ಧೈರ್ಯ ಮಾಡಿ ರಿಸ್ಕ್ ತೆಗೆದುಕೊಂಡೆ. ಕೆಜಿಎಫ್ ಸಿನಿಮಾ ಬಿಡುಗಡೆಯಾಗುವ ದಿನವೇ ಶಾರುಖ್ ಖಾನ್ ಅವರ ‘ಝೀರೊ’ ಬಿಡುಗಡೆಯಾಯ್ತು. ಹಿಂದಿಯಲ್ಲಿ ಅನಿಲ್ ತಡಾನಿಯೂ ಒಂದು ವಾರ ಮೊದಲೇ ಕೆಜಿಎಫ್ ಬಿಡುಗಡೆ ಮಾಡೋಣವೇ ಎಂದು ಕೇಳಿದ್ದರು. ಆದರೆ ನನಗೆ ಆ ದಿನಾಂಕದ ಮೇಲೆ ನಂಬಿಕೆ ಇತ್ತು. ಸಿನಿಮಾದ ಮೇಲೆ ನಂಬಿಕೆ ಇತ್ತು. ಅದೇ ದಿನ ಬಿಡುಗಡೆ ಮಾಡಿದೆವು.



ಝೀರೊ ಸಿನಿಮಾ ಖಂಡಿತ ಕೆಜಿಎಫ್ ಗಳಿಕೆಯ ಮೇಲೆ ಪರಿಣಾಮ ಬೀರಿದೆ. ಝೀರೊ ಇಲ್ಲದಿದ್ದರೆ ಕೆಜಿಎಫ್ ಇನ್ನಷ್ಟು ಗಳಿಕೆ ಮಾಡುತ್ತಿತ್ತು.

**◆ ಕೆಜಿಎಫ್ ಸಿನಿಮಾ ಗೆಲುವಿನ ಮಾದರಿಯಿಂದ ಕನ್ನಡ ಚಿತ್ರರಂಗಕ್ಕೆ ಕೆಲವು ಅಪಾಯಗಳೂ ಇವೆಯಲ್ಲವೇ?**

ಕೆಜಿಎಫ್‌ನ ಗೆಲುವು ಹೊರಮಾರುಕಟ್ಟೆಯಲ್ಲಿ ಕನ್ನಡ ಚಿತ್ರರಂಗಕ್ಕೆ ಅದ್ಭುತವಾದ ಆರಂಭ. ಕನ್ನಡ ಚಿತ್ರರಂಗದಲ್ಲಿ ಇಂಥ ಪ್ರತಿಭೆಗಳಿವೆ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ.

ಈಗ ಕನ್ನಡ ಸಿನಿಮಾಗಳಿಗೆ ಡಬ್ಬಿಂಗ್ ಬೆಲೆ ಜಾಸ್ತಿ ಆಗಿದೆ. ಡಿಜಿಟಲ್ ಮಾರುಕಟ್ಟೆಯೂ ಕನ್ನಡ ಸಿನಿಮಾಗಳಿಗೆ ತೆರೆದುಕೊಂಡಿದೆ. ಆದರೆ ಈ ಎಲ್ಲ ಸಾಧ್ಯತೆಗಳೂ ತೆರೆದುಕೊಂಡಿದ್ದು ಕನ್ನಡದಲ್ಲಿ ಪ್ರತಿಭೆಗಳಿವೆ ಎಂಬ ನಂಬಿಕೆಯಿಂದ. ಹಾಗಾಗಿ ಈ ನಂಬಿಕೆಯನ್ನು ಕಳೆದುಕೊಳ್ಳದ ಹಾಗೆ ನಮ್ಮ ನಿರ್ದೇಶಕರು, ನಿರ್ಮಾಪಕರು, ನಟರು ಕೆಲಸ ಮಾಡಬೇಕಿದೆ. ಸರಿಯಾಗಿ ಯೋಜನೆ ಮಾಡಿ ಹೊರಗಿನ ಮಾರುಕಟ್ಟೆಗೆ ಹೋಗಬೇಕು. ಸಿನಿಮಾ ಶುರುವಾಗುವ ಮೊದಲೇ ಹತ್ತು ಭಾಷೆಗಳಲ್ಲಿ ಮಾಡುತ್ತೇನೆ, ಐದು ಭಾಷೆಗಳಲ್ಲಿ ಮಾಡುತ್ತೇನೆ ಎಂದು ಹೇಳಿಕೊಳ್ಳುವುದರಿಂದ ಮಾರುಕಟ್ಟೆಯಲ್ಲಿ ಗೆಲ್ಲಿಸಲು ಸಾಧ್ಯವಿಲ್ಲ. ಒಳ್ಳೆಯ ವಿತರಕರು ಸಿಗಬೇಕು. ಸಂಪರ್ಕ ಬೆಳೆಯಬೇಕು. ಸಿನಿಮಾ ಬಗ್ಗೆ ಜನರಲ್ಲಿ ಕುತೂಹಲ ಹುಟ್ಟಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸಿನಿಮಾ ಚೆನ್ನಾಗಿರಬೇಕು. ಇಲ್ಲದಿದ್ದರೆ ಹೊರಗಿನ ಮಾರುಕಟ್ಟೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ. ಮಾರುಕಟ್ಟೆಯನ್ನು ಅರ್ಥಮಾಡಿಕೊಳ್ಳದೆ ಯದ್ವಾಬಿದ್ವಿ ಸಿನಿಮಾ ಮಾಡಿ ಒಂದಿಷ್ಟು ಭಾಷೆಗೆ ಡಬ್ ಮಾಡಿ ಸಿನಿಮಾ ಬಿಡುಗಡೆ ಮಾಡುತ್ತೇವೆ ಎಂದು ಹೋದರೆ ನಮ್ಮ ವಿಶ್ವಾಸಾರ್ಹತೆ ಮುಗಿದುಹೋಗುತ್ತದೆ ಅಷ್ಟೆ. ಕೆಜಿಎಫ್ ಈಗ ಒಂದು ಅವಕಾಶವನ್ನು ತೆರೆದಿದೆ. ಆ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುವುದು ಬೇಡ. ಈ ಸಿನಿಮಾಗಿಂತ ಒಳ್ಳೆಯ ಸಿನಿಮಾ ತೆಗೆದುಕೊಂಡು ಹೊರಗಿನ ಮಾರುಕಟ್ಟೆಗೆ ಹೋಗಿ; ಖಂಡಿತ ಗೆಲ್ಲಲು ಸಾಧ್ಯವಿದೆ. ■